# ಬೆಳ್ಳಕ್ಕಿ ಬೆಳ್ಳಕ್ಕಿ... ಹೊಸ ಬಂಗ್ರ ಕೊಡ್ ಕೊಡ್...

■ ಶ್ರೀಲಕ್ಷ್ಮೀ ಭಟ್

'ಅದರಲ್ಲೂ ನಮ್ಮ ತಲೆಮಾರಿನವರ ಕಥೆ ನೋಡು... ಅವಾಗ ಅಪ್ಪಯ್ಯ ಯಜಮಾನನಾಗಿದ್ದ. ಅವರಿಗೆ ಹೆದರಿಕ್ಯಂಡು ಬದುಕ್ಯಾತು, ಈಗ ಮಕ್ಕಕ್ಕೆ ಹೆದರ್‍ಕ್ಯಂಡು ಬದುಕವು. ಹೌದಾ, ಅಲ್ದಾ ಹೇಳು' ಎಂದು ಪರಮಣ್ಣ, ಮನೆಗೆ ಬಂದ ಮಾಬ್ಲುವಿನ ಬಳಿ ಮಾತನಾಡುತ್ತಿರುವುದನ್ನು ಗೀತಾ ಓರಿವಳದಿಂದಲೇ ಕೇಳಿಸಿಕೊಳ್ಳುತ್ತಲೇ ತಮ್ಮ ಪರಿಸ್ಥಿತಿಯ ಬಗ್ಗೆ ಇರುವ ಬೇಜಾರೊಂದು ಮತ್ತೊಮ್ಮೆ ಅದೇ ದಾರಿಯಲ್ಲಿ ಹಾದು ಹೋದಂತಾಯಿತು. 'ಹೆದರಿಕೆ' ಎಂಬುದು ತನ್ನ ಸ್ವತ್ತು ಮಾತ್ರ ಎಂದುಕೊಂಡಿದ್ದ ಅವಳಿಗೆ ಗಂಡನ ಬಾಯಲ್ಲಿಯೂ ಒಮ್ಮೆ ಈ ಶಬ್ದ ಕೇಳಿ ದಿಗ್ಭ್ರಮೆಯಾಯಿತು. ಪ್ರತಿಕ್ಷಣವೂ ವಿಚಿತ್ರ ಭಯದಲ್ಲೇ ಬದುಕುತ್ತಿರುವ ತನ್ನ ಈ ರೋಗದಂಥ ಸಮಸ್ಯೆ ಗಂಡನಿಗೂ ಅಂಟಿತೆ ಎಂಬ ಸಂಶಯ ಬಂತು. ಅಷ್ಟಕ್ಕೂ ಈ ಭಯ ಎಂಬ ಭೂತ ತನಗೆ ಅಂಟಿಕೊಳ್ಳಲು ಬಹಳಷ್ಟು ಕಾರಣಗಳಿವೆ. ಐವತ್ತರ ಈ ಋತುಬಂಧದ ಸಮಯದಲ್ಲಿ ಮಾನಸಿಕ ಸ್ಥಿತಿಯ ಏರುಪೇರು ಸಹಜವಾದದ್ದೇ ಎಂಬುದು ವಿದ್ಯಾವಂತೆಯಾದ ತನಗೆ ಗೊತ್ತಿರದ ಸಂಗತಿ ಏನಲ್ಲ. ಆದರೆ ತನ್ನ ಭಯ ಭ್ರಮೆಯಿಂದ ಬಂದದ್ದಲ್ಲ. ವಾಸ್ತವವಾಗಿ ಒದಗಿ ಬಂದ ಅದೆಷ್ಟು ಪರಿಸ್ಥಿತಿಗಳು ತನ್ನನ್ನು ಈ ಕೂಪಕ್ಕೆ ತಳ್ಳಿಬಿಟ್ಟಿವೆ.

ತನ್ನ ಗಂಡ ಗಟ್ಟಿಗ. ಅವರಿಗೆ ಇದೆಲ್ಲ ಸೋಕಲಾರದು ಎಂದುಕೊಳ್ಳುತ್ತಾ ಕೆಸುವಿನ ಸೊಪ್ಪನ್ನು ಮೆಟಗತ್ತಿಯಲ್ಲಿ ಹೆಚ್ಚುತ್ತಾ ಕುಳಿತಳು. ಉಪ್ಪು ನೀರಲ್ಲಿ ಹಾಕಿಟ್ಟ ಹಲಸಿನ ಸೊಳೆ ಮತ್ತು ಕೆಸುವಿನ ಸೊಪ್ಪು ಸೇರಿಸಿ ಅತ್ಯಂತ ರುಚಿಯ ಸೊಳೆಪಲ್ಯ ಮಾಡುವ ಯೋಚನೆ ಅವಳದಾಗಿತ್ತು. ಇನ್ನೇನು ಕೆಲಸ ತನಗೆ? ಬೆಳಿಗ್ಗೆ ಎದ್ದು ಬಾಗಿಲು ಸಾರಿಸಿ, ರಂಗೋಲಿ ಹಾಕಿ, ಆಸರಿಗೆ ತಯಾರಿ ಮಾಡಿ, ಕೆಲಸಕ್ಕೆ ಬರುವ ಆಳುಮಕ್ಕಳಿಗೆ ದೋಸೆ ಎರೆದಿಟ್ಟರೆ ಬೆಳಗಿನ ಕೆಲಸ ಮುಗಿಯಿತು. ಮನೆ ಕೆಲಸಕ್ಕೆ ಎಂದೇ ಬರುವ ಪಾರಿಯು ಗುಡಿಸಿ, ಉದ್ದಿ, ಪಾತ್ರೆ ತೊಳೆಯುವಷ್ಟು ಹೊತ್ತು ಅವಳೊಂದಿಗೆ ಒಂದಷ್ಟು ಹಲುಬಿದರೆ ಆಕೆ ಹೋದ ಮೇಲೆ ಅದೇ ಒಂಟಿತನ. ಮಕ್ಕಳಿಗೆ ಫೋನು ಮಾಡಿ ಮಾತನಾಡೋಣವೆಂದರೆ ಅವರೆಲ್ಲ ಆ ಹೊತ್ತಿಗೆ ಆಫೀಸಿನಲ್ಲಿ ಇರುತ್ತಾರೆ. ಅಂಗಳದಲ್ಲಿ ಸ್ವಲ್ಪ ಹೊತ್ತು ಕಾಲಾಡಿಕೊಂಡು ಅದೇ ಕುನ್ನಿ, ಬೆಕ್ಕು, ದನಕರುಗಳನ್ನು ನೋಡುತ್ತಾ ಹನ್ನೊಂದು ಗಂಟೆ ಹೊಡೆಯುತ್ತದೆ. ಪರಮಣ್ಣ ತೋಟವೋ, ಗದ್ದೆಯೋ ಎಂದು ಹೊರಟುಬಿಡುತ್ತಾನೆ. ತನ್ನ ಮದುವೆಯ ಕಾಲಕ್ಕೆ ತನ್ನ ಅಪ್ಪಯ್ಯನ ಹೆಗ್ಗಳಿಕೆ ಹೆಚ್ಚಿಸಿದ್ದ ಈ ಬೀಗರ ಮನೆಯ ನಾಕೆಕರೆ ಅಡಿಕೆ ತೋಟ, ಮೂರೆಕರೆ ಗದ್ದೆ, ಒಂದೆಕರೆ ತೆಂಗು, ಉಳಿದ ಎರಡು ಎಕರೆಯಲ್ಲಿ ಕಬ್ಬು... ಇಂದು ನಾವು ಗಂಡ ಹೆಂಡತಿಯರಿಗೆ ಹೊರಲಾರದ ಭಾರವಾಗಿದೆ. ಈ ಹಿರಿತಲೆಗಳಿಗೆ 'ಕೊಚ್ಚು ಪಾಲು' ಎಂಬುದನ್ನು ಯಾರು ತಲೆ ತುಂಬಿದರೋ ಗೊತ್ತಿಲ್ಲ. ನಾಲ್ಕು ಎಕರೆಗೆ ಹತ್ತು ಕಡೆ ಓಡಾಡಬೇಕು, ಇಪ್ಪತ್ತು ಕಡೆ ಗಡಿ... ಅಡಿಕೆ ಆರಿಸಿ ಪೂರೈಸಲಾಗುವುದಂತೂ ಅಲ್ಲ. ಈ ಮನೆಯೆಂಬ ಜೈಲಿನಲ್ಲಿ ಒಂಟಿಯಾಗಿರುವ ತಾನು ಅಲ್ಲಾದರೂ ಹೋಗಿ ಕಾಲಾಡಿಕೊಂಡು ಬರೋಣವೆಂದರೆ 'ಮನೆಗಾವಲು' ಎಂಬ ಜವಾಬ್ದಾರಿ ಹೊರಿಸಿದ್ದಾರೆ ತನಗೆ.

ಅಂಗಳದ ತುಂಬಾ ಒಣಗಿಸಿದ ಚಾಲಿ, ಅಟ್ಟದ ಮೇಲಿನ ಕೆಂಪಡಿಕೆ, ಸುತ್ತಲೂ ಇರುವ ಮುಳ್ಳುತಂತಿಯ ಬೇಲಿಗಳು ಹೊರಗಿನವರಿಗಲ್ಲ, ತನಗೇ ಕಟ್ಟಿದ್ದು ಎಂಬಂತೆ ಭಾಸವಾಗುತ್ತಿವೆ. ಇತ್ತೀಚೆಗೆ ತಾನು ಒಂದು ದ್ವೀಪದಂತಾಗುತ್ತಿದ್ದೇನೆ. ಯಾರೂ ಇರದ ಅಗಾಧ ಒಂಟಿತನ, ದಿನಕ್ಕೊಮ್ಮೆಯೂ ಫೋನಿಗೂ ಸಿಗದ ಮಕ್ಕಳು... ಪಾಪ... ಅವರಾದರೂ ಏನು ಮಾಡಿಯಾರು? ಆಫೀಸು ಕೆಲಸ ಮುಗಿಯುವುದಕ್ಕೆ ಹೊತ್ತು ಗೊತ್ತಿಲ್ಲ. ತಾನೊಬ್ಬಳು ಖಾಲಿ ಕೂತಿರುವೆ

**ಆ ದಿನ ರಾತ್ರಿ ಕವಳ ಹಾಕುತ್ತಿದ್ದ ಪರಮಣ್ಣನ ಬಳಿ ಧೈರ್ಯ ಮಾಡಿ ಕೇಳಿಯೇಬಿಟ್ಟಳು: 'ಕೇಳ್ಚ... ಎಷ್ಟು ವರ್ಷ ಈ ವಂಟ್ಮನೆ? ಒಂಟಿ ಜೀವನ? ಕೈ ಹಿಡಿದು ಕರ್ಕಂಡ್ ಬಂದವಳಿಗೆ ಒಂದ್ ಮುಷ್ಟಿ ಪ್ರೀತಿ, ಆತ್ಮೀಯತೆ, ಅವಳ ಆರೋಗ್ಯ ಯಾವುದು ಸಂಬಂಧ ಇಲ್ಲೇ ನಿಮಗೆ' ಎಂದು ಕಣ್ಣೀರಿಟ್ಟಳು. ಪರಮಣ್ಣ ಕದಲಲಿಲ್ಲ.**